# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/499/2022**
**ಪಿಒ/ಎ.ಅರ್.ಇ–2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:26/08/2022.

29

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ **ಶ್ರೀ. ಶ್ರೀಕಾಂತ ಭಟ್ ಬಿನ್ ಸುಬ್ರಾಯ್, ಹಿರಿಯ ಉಪನೋಂದಾಣಾಧಿಕಾರಿ, ಲಕ್ಷ್ಮೇಶ್ವರ, ತಾಲ್ಲೂಕು ಲಕ್ಷ್ಮೇಶ್ವರ, ಗದಗ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

**1.** ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ, ಇವರು ಪೋಲಿಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಗದಗ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **(1) ಶ್ರೀ. ಶ್ರೀಕಾಂತ ಭಟ್ ಬಿನ್ ಸುಬ್ರಾಯ್, ಹಿರಿಯ ಉಪನೋಂದಾಣಾಧಿಕಾರಿ, ಲಕ್ಷ್ಮೇಶ್ವರ, ತಾಲ್ಲೂಕು ಲಕ್ಷ್ಮೇಶ್ವರ, ಗದಗ ಜಿಲ್ಲೆ, (2) ಶ್ರೀ. ರವಿ ಬೆಟಗೇರಿ, ಬಿನ್ ಹನುಮಂತಪ್ಪ, ಗಣಕಯಂತ್ರ ನಿರ್ವಾಹಕ, (ಹೆಚ್‌ಸಿಎಲ್) (ಶ್ರೀವಿನ್ ಇನ್‌ಫೋಕಾಂ ಲಿ.) ಹಿರಿಯ ಉಪನೋಂದಾಣಾಧಿಕಾರಿಗಳವರ ಕಚೇರಿ, ಲಕ್ಷ್ಮೇಶ್ವರ, ತಾಲ್ಲೂಕು ಲಕ್ಷ್ಮೇಶ್ವರ, ಗದಗ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಇವರು ಸಾರ್ವಜನಿಕ ಕೆಲಸ ಮಾಡಿಕೊಡಲು ಅಕ್ರಮ ಸಂಭಾವನೆಗೆ ಬೇಡಿಕೆ ಇಟ್ಟು, ಅಕ್ರಮ ಸಂಭಾವನೆ ಸಂಗ್ರಹಿಸುತ್ತಿದ್ದಾರೆ ಎಂಬುದು ತಿಳಿದುಬಂದಿದ್ದು, ಅದರ ಮೇಲೆ ಶ್ರೀ. **ವಿಶ್ವನಾಥ ಹಿರೇಗೌಡರ, ಬಿನ್ ಕಲ್ಯಾಣಪ್ಪ, ಪೋಲೀಸ್ ಇನ್ಸ್‌ಪೆಕ್ಟರ್, ಎಸಿಬಿ ಪೋಲೀಸ್ ಠಾಣೆ, ಗದಗ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರು (ದೂರು) ವರದಿ ಸಲ್ಲಿಸಿದ್ದರ ಮೇರೆಗೆ ಸಾರ್ವಜನಿಕರಿಂದ ಅನಧಿಕೃತವಾಗಿ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಗದಗ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ **ಸಂ:17/2019**ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ಗದಗ ಜಿಲ್ಲೆ, ಲಕ್ಷ್ಮೇಶ್ವರ ಪಟ್ಟಣದ ಸಾರ್ವಜನಿಕರು, ಪೋಲೀಸ್ ಉಪಾಧೀಕ್ಷಕರು, ಎಸಿಬಿ ಪೋಲೀಸ್ ಠಾಣೆ, ಗದಗರವರಿಗೆ ಅಂಚೆ ಮೂಲಕ ದೂರನ್ನು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಅರ್ಜಿದಾರರು "ಗದಗ ಜಿಲ್ಲೆ, ಲಕ್ಷ್ಮೇಶ್ವರ ತಾಲ್ಲೂಕು, ಲಕ್ಷ್ಮೇಶ್ವರ ಪಟ್ಟಣದ ಹಾಗೂ ಸುತ್ತಮುತ್ತಲಿನ ಜನರ ಪರವಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳು ಮತ್ತು ವಿವಾಹ ನೋಂದಣಾಧಿಕಾರಿಗಳ ಕಚೇರಿಯಲ್ಲಿ ದೈನಂದಿನವಾಗಿ ನಡೆಯುತ್ತಿರುವ ಸರ್ಕಾರಿ ಕೆಲಸಗಳಲ್ಲಿ ದಲ್ಲಾಳಿಗಳ ಹಾವಳಿ ಮಿತಿಮೀರಿದ್ದು, ನಿಯಂತ್ರಣಕ್ಕೆ ಬಾರದ ಕಾರಣ ಹಾಗೂ ಸದರಿ ಕಚೇರಿಯಲ್ಲಿ ಹಣದ ಆಸೆಗೆ ಮಿತಿಗೆ ಪಾರವೇ ಇಲ್ಲಾ, ಇಲ್ಲಿರುವ ಸರ್ಕಾರಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು, ಬಾಂಡ್ ರೈಟರ್‌ಗಳಾಗಲೀ ಹಣ ಇಲ್ಲದೇ ಯಾವುದೇ ಕೆಲಸವನ್ನು ಮುಟ್ಟುವುದಿಲ್ಲಾ, ಈ ಬಗ್ಗೆ ಮಾನ್ಯ ಸಬ್‌ರಿಜಿಸ್ಟರ್ ರವರಲ್ಲಿ ವಿನಂತಿಸಿದಾಗ ಅವರು ಸಿಸ್ಟಮ್ ಹೇಗಿದೆ ಅದೇ ರೀತಿ ಕೆಲಸವನ್ನು ಮಾಡಿಸಿಕೊಂಡು ಹೋಗಬೇಕಾಗಿ, ಯಾವುದೇ ರೀತಿಯ ವಾದವಿವಾದಕ್ಕೆ ದಾರಿ ಇಲ್ಲ ಅಂತಾ ನಮಗೆ ಬುದ್ದಿ ಮಾತನ್ನು ಹೇಳಿ ಮತ್ತು ಕೇಳಿದಷ್ಟು ಹಣ ಕೊಟ್ಟು ಕೆಲಸವನ್ನು ಮಾಡಿಸಿಕೊಂಡು ಸರಳರೀತಿಯಿಂದ ಹೋಗಬೇಕೆಂದು ತಿಳಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ" ವಿನಂತಿಸಿಕೊಂಡಿರುತ್ತಾರೆ. ಅಂಚೆ ಮೂಲಕ ಬಂದ ಅರ್ಜಿಯ ಬಗ್ಗೆ ಆರಕ್ಷಕ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಗದಗ, ರವರು ಸದರಿ ದೂರಿನ ಬಗ್ಗೆ ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿ ಹಾಗೂ ಸುತ್ತಮುತ್ತಲಿನ ದಸ್ತು ಬರಹಗಾರರ ಕೇಂದ್ರಗಳು ಮತ್ತು ಜೆರಾಕ್ಸ್ ಸೆಂಟರ್‌ಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಗೌಪ್ಯವಾಗಿ ಬಾತ್ಮೀದಾರರ ಮೂಲಕ ಮಾಹಿತಿಯನ್ನು ಸಂಗ್ರಹಿಸಿ, ವರದಿ ಮಾಡುವಂತೆ ಶ್ರೀ. ವಿಶ್ವನಾಥ ಹಿರೇಗೌಡರ, ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಗದಗ, ರವರಿಗೆ ಸೂಚಿಸಿದ್ದು, ಅದರಂತೆ ನಿರೀಕ್ಷಕರು ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿ ಹಾಗೂ ಸುತ್ತಮುತ್ತಲಿನ ದಸ್ತು ಬರಹಗಾರರ ಕೇಂದ್ರಗಳು ಮತ್ತು ಜೆರಾಕ್ಸ್ ಸೆಂಟರ್‌ಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಗೌಪ್ಯವಾಗಿ ಬಾತ್ಮೀದಾರರ ಮೂಲಕ ಮಾಹಿತಿಯನ್ನು ಸಂಗ್ರಹಿಸಿದ್ದು, ಆರಕ್ಷಕ ನಿರೀಕ್ಷಕರಿಗೆ ಅರ್ಜಿಯ ವಿಷಯದಲ್ಲಿ ನೈಜತೆ ಇರುವುದು ಮನವರಿಕೆಯಾಗಿದ್ದರಿಂದ ಉಪನೋಂದಣಾಧಿಕಾರಿಗಳ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ದಸ್ತು ಬರಹಗಾರರು, ಮಧ್ಯವರ್ತಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯಿದೆ 1988ರ ಅಡಿ

ಪ್ರಕರಣ ದಾಖಲಿಸಿ, ಲಕ್ಷ್ಮೇಶ್ವರ ಉಪನೋಂದಣಾಧಿಕಾರಿಗಳ ಕಚೇರಿ, ದಸ್ತು ಬರಹಗಾರರ ಕೇಂದ್ರ ವೆಂಕಣ್ಣ ಗುಡಿ, ಇವರ ಮನೆಯನ್ನು ಶೋಧನೆ ಮಾಡಿದಲ್ಲಿ ಸಾರ್ವಜನಿಕರಿಂದ ಅಕ್ರಮವಾಗಿ ಸಂಗ್ರಹಿಸಿದ ಹಣ, ಸಾರ್ವಜನಿಕರ ಹಾಗೂ ಸರ್ಕಾರಕ್ಕೆ ಸಂಬಂಧಿಸಿದ ದಾಖಲಾತಿಗಳು ದೊರೆಯುವ ಸಾಧ್ಯತೆ ಇರುತ್ತದೆ. ಕಾರಣ, ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವುದು ಅವಶ್ಯ ಇರುತ್ತದೆಯೆಂದು ವರದಿಯನ್ನು ನಿವೇದಿಸಿಕೊಂಡಿದ್ದರ ಮೇರೆಗೆ, ಪೋಲೀಸ್ ಉಪಾಧೀಕ್ಷಕರು ಸದರಿ ವರದಿಯ ಆಧಾರದ ಮೇಲಿಂದ ಎದುರುದಾರರು ಹಾಗೂ ಇತರರ ಮೇಲೆ ದಿನಾಂಕ:12/12/2019ರಂದು ಬೆಳಿಗ್ಗೆ ಠಾಣಾ ಮೊಕದ್ದಮೆ **ಸಂ.17/2019**ರಲ್ಲಿ ಕಲಂ 7(a), 7(A), 12, ಭ್ರಷ್ಟಾಚಾರ ನಿಗ್ರಹ ಕಾಯಿದೆ 1988ರ ರೀತ್ಯಾ ಸ್ವ-ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ii. ಪ್ರಕರಣ ದಾಖಲಿಸಿಕೊಂಡ ನಂತರ ಅದೇ ದಿನ ಅಂದರೆ ದಿ:12/12/2019ರಂದು ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ (1) ಶ್ರೀ. ಕಿಶೋರಕುಮಾರ, ಕಿರಿಯ ಸಹಾಯಕರು, ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ. ವಿಭಾಗೀಯ ಕಚೇರಿ, ಗದಗ, (2) ಶ್ರೀ. ಆನಂದ, ದ್ವಿ.ದ.ಸ., ಸಹಕಾರಿ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ನೋಂದಣಾಧಿಕಾರಿಗಳು, ಗದಗ, ಇವರುಗಳನ್ನು ಗದಗ ಎಸಿಬಿ ಕಚೇರಿಗೆ ಬರಮಾಡಿಕೊಂಡಿದ್ದು, ಅವರುಗಳ ಪರಿಚಯವನ್ನು ಮಾಡಿಕೊಂಡು, ತಮ್ಮ ಪರಿಚಯ ಹೇಳಿ, ದೂರಿನ ವಿಷಯ ಹಾಗೂ ಪ್ರಕರಣ ದಾಖಲು ಮಾಡಿಕೊಂಡ ಬಗ್ಗೆ ಪಂಚರಿಗೆ ತಿಳಿಸಿ, ಪಂಚರುಗಳಾಗಿ ಸಹಕರಿಸಲು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚರಿಗೆ ಗದಗ ಜಿಲ್ಲೆ, ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಗೂ ದಸ್ತು ಬರಹಗಾರರು, ದಲ್ಲಾಳಿಗಳು ಸಾರ್ವಜನಿಕರ ಸರ್ಕಾರಿ ಕೆಲಸ ಕಾರ್ಯ ಮಾಡಿಕೊಡಲು ಅಕ್ರಮವಾಗಿ ಸಾಕಷ್ಟು ಲಂಚದ ಹಣ ಪಡೆದು, ಕೆಲಸ ಮಾಡಿ ಕೊಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಬಂದ ದೂರಿನ ಹಿನ್ನೆಲೆಯಲ್ಲಿ ಈ ಬಗ್ಗೆ ಸ್ಥಾನಿಕವಾಗಿ ಪರಿಶೀಲನೆ ಮಾಡಿ ವರದಿ ಮಾಡಲು ಎಸಿಬಿ ಗದಗ ಠಾಣೆ ಪಿ.ಐ. ಶ್ರೀ. ವಿಶ್ವನಾಥ, ಇವರಿಗೆ ಆದೇಶಿಸಿದಂತೆ ಅವರು ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಅಲ್ಲಿಯ ವ್ಯವಹಾರದ ಬಗ್ಗೆ ಗಮನಿಸಿ ವರದಿಯನ್ನು ಸಲ್ಲಿಸಿದ್ದು, ಅದರಂತೆ ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿ ಹಾಗೂ ಪ್ರಭಾವಿ ದಸ್ತು ಬರಹಗಾರ ವೆಂಕಣ್ಣ ಗುಡಿ ಇವರ ಮನೆಯನ್ನು ಶೋಧನೆ ಮಾಡುವ ಬಗ್ಗೆ ಘನ

ನ್ಯಾಯಾಧೀಶರಿಂದ ಶೋಧನಾ ವಾರೆಂಟ್ ಪಡೆದು ಶ್ರೀ. ಬಿ.ಎ. ಜಾಧವ, ಪಿ.ಐ. ದಾರವಾಡ, ಎಸಿಬಿ ಠಾಣೆ, ಇವರಿಗೆ ದಸ್ತು ಬರಹಗಾರ ವೆಂಕಣ್ಣ ಗುಡಿ ಇವರ ಮನೆಯನ್ನು ಶೋಧನೆ ಮಾಡುವ ಬಗ್ಗೆ ಮತ್ತು ಪಂಚನಾಮೆ ಜರುಗಿಸಬೇಕಾಗಿದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

iii. ನಂತರ ತನಿಖಾಧಿಕಾರಿಯವರು ಇನ್ನಿಬ್ಬರು ಸರ್ಕಾರಿ ನೌಕರರಾದ (1) ಬಸವರಾಜ್ ಚಿಕ್ಕನರಗುಂದ, ಕಿರಿಯ ಸಹಾಯಕರು, ವಿಭಾಗೀಯ ಕಚೇರಿ, ಹೆಸ್ಕಾಂ, ಗದಗ, (2) ಸನಾವುಲ್ಲಾ ಜಮಾದಾರ, ದ್ವಿದ.ಸ., ಪಚವಿ ಪೂರ್ವ ಶಿಕ್ಷಣ ಇಲಾಖೆ, ಡಿ.ಸಿ. ಆಫೀಸ್, ಗದಗ, ಇವರುಗಳಿಗೆ ದಸ್ತು ಬರಹಗಾರ ವೆಂಕಣ್ಣ ಗುಡಿ ಇವರ ಮನೆಯನ್ನು ಶೋಧನೆಯ ಕಾಲಕ್ಕೆ ಪಂಚಸಾಕ್ಷಿದಾರರಾಗಿ ಕಾರ್ಯ ನಿರ್ವಹಿಸಲು ಸೂಚಿಸಿ ಶ್ರೀ. ಬಿ.ಎ. ಜಾಧವ, ಇವರಿಗೆ ಪರಿಚಯಿಸಿ, ಶೋಧನಾ ವಾರೆಂಟ್‌ನ್ನು ನೀಡಿರುತ್ತಾರೆ.

iv. ಅದೇ ದಿನ ದಿನಾಂಕ: 12/12/2019ರಂದು ಮಧ್ಯಾಹ್ನ 14–00 ಗಂಟೆಗೆ ಪಂಚಸಾಕ್ಷಿದಾರರು, ತನಿಖಾಧಿಕಾರಿಯವರೊಂದಿಗೆ ಸರ್ಕಾರಿ ವಾಹನದಲ್ಲಿ ಗದಗ ಎಸಿಬಿ ಠಾಣೆಯಿಂದ ಲಕ್ಷ್ಮೇಶ್ವರಕ್ಕೆ ಹೊರಟಿದ್ದು, ಅವರನ್ನು ಹಿಂಬಾಲಿಸಿಕೊಂಡು 15–ನಿಮಿಷಗಳ ನಂತರ ಶ್ರೀ. ಬಿ.ಎ. ಜಾಧವ, ಪಿ.ಐ. ಇಬ್ಬರು ಪಂಚರುಗಳೊಂದಿಗೆ ಅವರನ್ನು ಹಿಂಬಾಲಿಸಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಅದರಂತೆ ಮೇಲ್ಕಂಡ ಎಲ್ಲರೂ ಸರ್ಕಾರಿ ವಾಹನಗಳಲ್ಲಿ ಗದಗ ಎಸಿಬಿ ಕಚೇರಿಯನ್ನು ಬಿಟ್ಟು ಹರ್ತಿ ಮುಳಗುಂದ, ಗೋಜನೂರ ಗ್ರಾಮಗಳ ಮೂಲಕ ಲಕ್ಷ್ಮೇಶ್ವರ ದೂದ ನಾನಾದುರ್ಗಾ, ಹಳೇ ಪೋಲೀಸ್ ಠಾಣೆಯ ಹಿಂದಿನ ರಸ್ತೆಯಲ್ಲಿ ಬಂದು ವಿಶೇಷ ತಹಶೀಲ್ದಾರ್‌ರವರ ಕಚೇರಿ ಹಾಗೂ ಉಪನೋಂದಣಾಧಿಕಾರಿಗಳ ಕಚೇರಿಯ ಕಟ್ಟಡದಿಂದ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಿ, ತನಿಖಾಧಿಕಾರಿಯವರು ದಾಳಿ ತಂಡದವರೊಂದಿಗೆ ನಡೆದುಕೊಂಡು ಉಪನೋಂದಣಾಧಿಕಾರಿಗಳ ಕಚೇರಿಗೆ ಹೋದಾಗ, ಕೆಲವು ಸಾರ್ವಜನಿಕರು ಹಾಜರಿದ್ದರು. ಆಗ ಸಮಯ ಮಧ್ಯಾಹ್ನ 03–10 ಗಂಟೆಯಾಗಿತ್ತು. ತನಿಖಾಧಿಕಾರಿಯವರು ಕಚೇರಿಯ ಒಳಗೆ ಹೋಗಿ ಎದುರಿಗೆ ಕುಳಿತು ಕೆಲಸ ಮಾಡುತ್ತಿದ್ದ ಸಬ್‌ರಿಜಿಸ್ಟರ್‌ರವರನ್ನು ಭೇಟಿ ಮಾಡಿ ದೂರಿನ ಬಗ್ಗೆ, ನ್ಯಾಯಾಲಯದಿಂದ ಪಡೆದಿರುವ ಶೋಧನಾ ವಾರೆಂಟ್ ಪಡೆದಿರುವ ಬಗ್ಗೆ ಅವರಿಗೆ ತಿಳಿಸಿ, ಅವರ ಪರಿಚಯ ಮಾಡಿಕೊಂಡು, ತಮ್ಮ ಪರಿಚಯ ಹೇಳಿ, ಶೋಧನಾ ವಾರೆಂಟ್ ನೀಡಿ ಅವರ ಸಹಿ ಪಡೆದು ಶೋಧನಾ ಕಾರ್ಯಕ್ಕೆ ಸಹಕರಿಸುವ ಬಗ್ಗೆ ಸೂಚಿಸಿದಂತೆ, 1ನೇ ಎದುರುದಾರರು ಒಪ್ಪಿಕೊಂಡಿರುತ್ತಾರೆ.

v. ನಂತರ ತನಿಖಾಧಿಕಾರಿಯವರು ಕಚೇರಿಯಲ್ಲಿ ಹಾಜರಿದ್ದ 1ನೇ ಎದುರುದಾರರು ಮತ್ತು ಸಿಬ್ಬಂದಿಯವರನ್ನು ಒಬ್ಬೊಬ್ಬರಾಗಿ ವಿಚಾರ ಮಾಡಿ ಪರಿಶೀಲಿಸಲಾಗಿ, 1ನೇ ಎದುರುದಾರರ ಬಳಿ ದೊರೆತ ನಗದು ಹಣ ರೂ. 9390/-, ದೊರೆತಿದ್ದು, ಈ ಬಗ್ಗೆ ವಿಚಾರಿಸಿದಾಗ ಅವರು ಸಮರ್ಪಕ ವಿವರಣೆ ಒದಗಿಸದೇ ಹಾಗೂ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದ ಕಾರಣ, ಸದರಿ ಹಣವನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ನಂತರ ಕಚೇರಿಯಲ್ಲಿ ಹಾಜರಿದ್ದ ದಸ್ತು ಬರಹಗಾರರಾದ (1) ಶ್ರೀ. ವೆಂಕಟೇಶ ರಾಘವೇಂದ್ರ ಗುಡಿ, ಇವರ ಬಳಿ ದೊರೆತ ನಗದು ಹಣ ರೂ.12,640/-, (2) ಶ್ರೀ. ಧರ್ಮಪ್ಪ ಹೊನ್ನಪ್ಪ ಹೋರಿ, ಇವರ ಬಳಿ ದೊರೆತ ನಗದು ಹಣ ರೂ.7,620/-, (3) ಶ್ರೀ. ರಾಜಶೇಖರ ಒಂಕಾರಪ್ಪ ಮುಳಗುಂದ, ಇವರ ಬಳಿ ದೊರೆತ ನಗದು ಹಣ ರೂ.1,750/-, (4) ಶ್ರೀ. ರಾಘವೇಂದ್ರ ರಾಮಚಂದ್ರ ಕುಲಕರ್ಣಿ, ಇವರ ಬಳಿ ದೊರೆತ ನಗದು ಹಣ ರೂ.5,400/- ಆಗಿರುತ್ತದೆ. ಸದರಿ 4-ಜನ ದಸ್ತು ಬರಹಗಾರರ ಬಳಿ ದೊರೆತ ಹಣದ ಬಗ್ಗೆ ಅವರುಗಳು ಸಮರ್ಪಕ ವಿವರಣೆ ನೀಡದೇ ಇದ್ದ ಕಾರಣ ಸದರಿ ಹಣವನ್ನು ತನಿಖಾಧಿಕಾರಿಯವರು ತಮ್ಮ ವಶಕ್ಕೆ ಪಡೆದಿರುತ್ತಾರೆ. ಅದೇ ವೇಳೆಯಲ್ಲಿ ಶ್ರೀ. ಬಿ.ಎ. ಜಾಧವ, ಪಿ.ಐ. ಧಾರವಾಡ, ಎಸಿಬಿ ಠಾಣೆ, ರವರು ಶೋಧನಾ ಸ್ಥಳಕ್ಕೆ ಬಂದಿದ್ದು, ಅವರಿಗೆ ಶ್ರೀ. ವೆಂಕಟೇಶ ರಾಘವೇಂದ್ರ ಗುಡಿ, ರವರನ್ನು ಪರಿಚಯಿಸಿ, ಅವರ ಮನೆಯನ್ನು ಶೋಧನೆ ಮಾಡಲು ನ್ಯಾಯಾಲಯದಿಂದ ಪಡೆದಿರುವ ಶೋಧನಾ ವಾರೆಂಟ್ ಪಡೆದಿರುವ ಬಗ್ಗೆ ಅವರಿಗೆ ತಿಳಿಸಿ, ಅವರೊಂದಿಗೆ ಮನೆ ಶೋಧನೆ ಮಾಡಲು ಸಹಕರಿಸಲು ತಿಳಿಸಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಜನರಾದ (1) ಸುನಿತ, (2) ಶಕುಂತಲ, ಇವರನ್ನು ತಪಾಸಿಸಿದಾಗ ಅವರ ಬಳಿ ನಗದು ಹಣ ದೊರೆತಿರುವುದಿಲ್ಲ. (3) ಗಣೇಶ, ಇವರ ಬಳಿ 17,200/- ರೂ. ದೊರೆತಿರುತ್ತದೆ, (4) ಬಸವರಾಜ್, ಇವರನ್ನು ತಪಾಸಿಸಿದಾಗ ಇವರ ಬಳಿ ನಗದು ಹಣ ದೊರೆತಿರುವುದಿಲ್ಲ. (5) ರವಿ, ಇವರನ್ನು ತಪಾಸಿಸಿದಾಗ ಇವರ ಬಳಿ ರೂ.1570/- ನಗದು ಹಣ ದೊರೆತಿರುತ್ತದೆ, (6) ಈರಣ್ಣ, ಇವರನ್ನು ತಪಾಸಿಸಿದಾಗ ಇವರ ಬಳಿ ರೂ.7/- ನಗದು ಹಣ ದೊರೆತಿರುತ್ತದೆ. ಈ 6-ಜನರ ಪೈಕಿ ಗಣೇಶ ಬಳಿ ದೊರೆತ 17,200/- ಮತ್ತು ರವಿ ಇವರ ಬಳಿ ದೊರೆತ 1570/-ರೂ.ಗಳ ಬಗ್ಗೆ ಅವರುಗಳು ಸಮಂಜಸ ವಿವರಣೆ ನೀಡದ ಕಾರಣ, ಸದರಿ ಹಣವನ್ನು ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

vii.ನಂತರ ತನಿಖಾಧಿಕಾರಿಗಳು ದಿನಾಂಕ: 12/12/2019ರಂದು ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾದ ಕಾಗದಪತ್ರಗಳ ಮಾಹಿತಿ ಒದಗಿಸಲು 1ನೇ ಎದುರುದಾರರಿಗೆ ಸೂಚಿಸಿದಾಗ, 1ನೇ ಎದುರುದಾರರು ಸದರಿ ದಿನದಂದು ನೋಂದಣಿಯಾದ ದಸ್ತಾವೇಜುಗಳನ್ನು ಹಾಗೂ ನೋಂದಣಿ ಫೀ ಮತ್ತು ಸ್ಕ್ಯಾನಿಂಗ್ ಫೀ ಮಾಹಿತಿ ಪಟ್ಟಿಯನ್ನು ಹಾಗೂ ನೋಂದಣಿಗಾಗಿ ಬಾಕಿ ಇರುವ ಕಾಗದ ಪತ್ರಗಳ ವಿವರವನ್ನು ಹಾಜರುಪಡಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಸದರಿ 1ನೇ ಎದುರುದಾರರು ಹಾಜರುಪಡಿಸಿರುವ ದಾಖಲಾತಿಗಳನ್ನು ಗದಗ ಉಪನೋಂದಣಾಧಿಕಾರಿಗಳ ಕಚೇರಿಯಿಂದ ಹಾಜರಾದ ಶ್ರೀ. ಗೋಪಾಲ್ ಬಿಲ್‌ಕೇರಿ, ಎಸ್.ಡಿ.ಎ.ರವರಿಂದ ಜೆರಾಕ್ಸ್ ಮಾಡಿಸಿ, ಧೃಡೀಕರಿಸಿಕೊಂಡು ಪ್ರತಿಗಳನ್ನು ಪಡೆದುಕೊಂಡಿರುತ್ತಾರೆ.

viii ಆ ಸಂದರ್ಭದಲ್ಲಿ ದಸ್ತು ಬರಹಗಾರ ವೆಂಕಟೇಶ ಗುಡಿ ಇವರ ಮನೆಯನ್ನು ಶೋಧನೆ ಮಾಡಲು ಹೋದ ಶ್ರೀ. ಬಿ.ಎ. ಜಾಧವ, ಪಿ.ಐ. ಧಾರವಾಡ ಎಸಿಬಿ ಠಾಣೆ, ಇವರು ಉಪನೋಂದಣಾಧಿಕಾರಿಗಳ ಕಚೇರಿಗೆ ಬಂದು ತನಿಖಾಧಿಕಾರಿಗಳನ್ನು ಭೇಟಿ ಮಾಡಿ ವೆಂಕಟೇಶ ಗುಡಿ ಇವರ ಮನೆಯ ಶೋಧನಾ ಕಾಲಕ್ಕೆ ದೊರೆತ ನಗದು ಹಣ ರೂ.55,360/– ಹಾಗೂ ಉಪನೋಂದಣಾಧಿಕಾರಿಗಳ ಕಚೇರಿಗೆ ಸಂಬಂಧಿಸಿದ ದಾಖಲಾತಿಗಳು ದೊರೆತಿರುವ ಬಗ್ಗೆ ವರದಿ ಮಾಡಿ, ಸದರಿ ನಗದು ಹಣ ಹಾಗೂ ದಾಖಲಾತಿಗಳನ್ನು ಶೋಧನಾ ಪಂಚನಾಮೆಯ ಕಾಲಕ್ಕೆ ಜಪ್ತು ಮಾಡಿರುವುದಾಗಿ ತಿಳಿಸಿ, ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಸದರಿ ದಾಖಲಾತಿಗಳನ್ನು ಮತ್ತು ನಗದು ಹಣವನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

ix. ಲಕ್ಷ್ಮೇಶ್ವರ ಪಟ್ಟಣದ ಉಪನೊಂದಣಾಧಿಕಾರಿಗಳ ಕಚೇರಿಯ ನಗದು ಘೋಷಣಾ ವಹಿಯಲ್ಲಿ 1ನೇ ಎದುರುದಾರರು ತಮ್ಮ ಬಳಿ 100/–ರೂ. ಇರುವುದಾಗಿ ನಮೂದಿಸಿದ್ದು, ಶೋಧನೆಯ ಕಾಲಕ್ಕೆ ಅವರ ಬಳಿ ರೂ.9390/– ದೊರೆತಿರುತ್ತದೆ. ಅದರಂತೆ ದಿ:12/12/2019ರಂದು ನೋದಣಿಯಾದ ಕಾಗದಗಳ ವಸೂಲಿ ಮಾಡಿದ ಒಟ್ಟು ಶುಲ್ಕ, ಸಬ್ ರಿಜಿಸ್ಟರ್ ಶ್ರೀ. ಸುಬ್ರಾಯ್ ಭಟ್ ಹಾಗೂ ಅವರ ಕಚೇರಿಯ ಜವಾನ ಹಾಗೂ ಮಧ್ಯವರ್ತಿ ಶ್ರೀ. ಗಣೇಶ ಅಂಗಡಿ ಇವರ ಬಳಿ ದೊರೆತ ರೂ.17,200/–ಗಳಿಗೆ ತಾಳೆಯಾಗಿರುವುದಿಲ್ಲ. ಅಲ್ಲದೇ ದಸ್ತು ಬರಹಗಾರ ವೆಂಕಟೇಶ ಗುಡಿ ಇವರ ಬಳಿ ದೊರೆತ ನಗದು ಹಣ ಮತ್ತು ಅವರ ವಾಸದ ಮನೆಯಲ್ಲಿ ದೊರೆತ ನಗದು ಹಣದ ಬಗ್ಗೆ ವೆಂಕಟೇಶ ಗುಡಿ,

ಇವರು ಯಾವುದೇ ವಿವರಣೆ ನೀಡಿರುವುದಿಲ್ಲ ಹಾಗೂ ಉಪನೋಂದಣಾಧಿಕಾರಿಗಳ ಕಚೇರಿಯ ದಸ್ತಾವೇಜುಗಳು ಅವರ ಮನೆಯಲ್ಲಿ ದೊರೆತಿರುತ್ತವೆ. ಆದ್ದರಿಂದ (1) ಶ್ರೀ. ಸುಬ್ರಾಯ್ ಭಟ್, ಸಬ್ ರಿಜಿಸ್ಟರ್, ಹಾಗೂ ಅವರ ಕಚೇರಿಯ ಜವಾನ ಹಾಗೂ ಮಧ್ಯವರ್ತಿ (2) ಶ್ರೀ. ಗಣೇಶ ಸಿದ್ದಪ್ಪ ಅಂಗಡಿ ಮತ್ತು ದಸ್ತು ಬರಹಗಾರ ಮತ್ತು ಮಧ್ಯವರ್ತಿಯಾದ (3) ಶ್ರೀ. ವೆಂಕಟೇಶ ರಾಘವೇಂದ್ರ ಗುಡಿ, ಇವರುಗಳನ್ನು ಈ ಪ್ರಕರಣದಲ್ಲಿ ದಸ್ತಗಿರಿ ಮಾಡಿರುತ್ತಾರೆ. ಶ್ರೀಕಾಂತ್ ಸುಬ್ರಾಯ್ ಭಟ್, ಉಪನೋಂದಣಾಧಿಕಾರಿಗಳು, ಲಕ್ಷ್ಮೇಶ್ವರ, ಇವರನ್ನು ದಸ್ತಗಿರಿ ಮಾಡಿದ ಬಗ್ಗೆ ಶ್ರೀ. ಗೋಪಾಲ ರಾಮಪ್ಪ ಬಿಲಕೇರಿ, ಎಸ್.ಡಿ.ಎ. ಉಪನೋಂದಣಾಧಿಕಾರಿಗಳ ಕಚೇರಿ, ಗದಗ, ಇವರಿಗೆ, ಗಣೇಶ ಸಿದ್ದಪ್ಪ ಅಂಗಡಿ, ಜವಾನ ಹಾಗೂ ಮಧ್ಯವರ್ತಿ, ಇವರನ್ನು ದಸ್ತಗಿರಿ ಮಾಡಿದ ಬಗ್ಗೆ ಶ್ರೀ. ರವಿ, ಹ. ಬೆಟಗೇರಿ, ಕಂಪ್ಯೂಟರ್ ಆಪರೇಟರ್, ಉಪನೋಂದಣಾಧಿಕಾರಿಗಳ ಕಚೇರಿ, ಲಕ್ಷ್ಮೇಶ್ವರ, ಇವರಿಗೆ, ಮತ್ತು ವೆಂಕಟೇಶ ರಾಘವೇಂದ್ರ ಗುಡಿ, ಇವರನ್ನು ದಸ್ತಗಿರಿ ಮಾಡಿದ ಬಗ್ಗೆ ಶ್ರೀ. ರಾಜಶೇಖರ, ಓ, ಮುಳಗುಂದ, ದಸ್ತು ಬರಹಗಾರ, ಇವರಿಗೆ ಲಿಖಿತ ಮಾಹಿತಿ ಒದಗಿಸಿ, ತನಿಖಾಧಿಕಾರಿಗಳು ದಸ್ತಗಿರಿ ಮಾಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ಫೋಟೋ ತೆಗೆದು ದಿನಾಂಕ: 12/12/2019ರಂದು ಸಂಜೆ 15–15 ಗಂಟೆಯಿಂದ ರಾತ್ರಿ 19–30 ಗಂಟೆಯವರೆಗೆ ಗದಗ ಜಿಲ್ಲೆ, ಲಕ್ಷ್ಮೇಶ್ವರ ತಾಲ್ಲೂಕು, ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ತನಿಖಾಧಿಕಾರಿಗಳು ಶೋಧನಾ ಪಂಚನಾಮೆಯನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ತನಿಖಾಧಿಕಾರಿಗಳು ದಿನಾಂಕ:12/12/2019ರಂದು ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿ ಹಾಗೂ ದಸ್ತು ಬರಹಗಾರ ವೆಂಕಟೇಶ ಗುಡಿ, ಇವರ ಮನೆಯಲ್ಲಿ ಜರುಗಿಸಿದ ಶೋಧನಾ ಪಂಚನಾಮೆಗಳ ಕಾಲಕ್ಕೆ ವಶಪಡಿಸಿಕೊಳ್ಳಲಾದ ವಸ್ತುಗಳನ್ನು ಹಾಗೂ ದಾಖಲಾತಿಗಳನ್ನು ಠಾಣಾ ಮಾಲು ಪಟ್ಟಿ ಸಂ:16/2019ರಲ್ಲಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತಾರೆ.

x. ತನಿಖಾಧಿಕಾರಿಗಳು 1ನೇ ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

xi. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, 1ನೇ ಮತ್ತು 2ನೇ ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

xii. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xiii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, 1ನೇ ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

**2.** ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, 1ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ:20/04/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ಮುಂದುವರೆದು ತಮ್ಮ ಸಮಜಾಯಿಷಿಯಲ್ಲಿ "ನಾನು ದಿನಾಂಕ: 10/11/2011 ರಿಂದ 12/12/2019ರವರೆಗೆ ಅಂದರೆ ಎಂಟು ವರ್ಷಗಳ ಕಾಲ ಉಪನೊಂದಣಿ ಅಧಿಕಾರಿಯಾಗಿ ಉಪ ನೋಂದಣಿ ಕಚೇರಿ, ಲಕ್ಷ್ಮೇಶ್ವರದಲ್ಲಿ ಕಾರ್ಯನಿರ್ವಹಿಸಿರುತ್ತೇನೆ. ಸಹಾಯಕರಾಗಿ ಯಾವುದೇ ಸರಕಾರಿ ಸಿಬ್ಬಂದಿ ಇಲ್ಲದ ಕಾರಣ ಗಣಕಯಂತ್ರ ನಿರ್ವಾಹಕರು ಮತ್ತು ನಾನು ಆ ಕಾರ್ಯಾಲಯಕ್ಕೆ ವರದಿ ಮಾಡಿಕೊಳ್ಳುವುದಕ್ಕಿಂತ ಪೂರ್ವದಲ್ಲಿ ಜವಾನನಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ. ಗಣೇಶರೊಂದಿಗೆ ಕಾರ್ಯಲಯದ ಕೆಲಸವನ್ನು ಸುಗಮವಾಗಿ ನಡೆಸಿಕೊಂಡು ಬಂದಿರುತ್ತೇನೆ. ಈ ಅವಧಿಯಲ್ಲಿ ನನಗೆ ಸಾರ್ವಜನಿಕರು,

ದಸ್ತು ಬರಹಗಾರರು ತಮ್ಮ ಕೆಲಸವನ್ನು ಮಾಡಿಕೊಡುವುದಕ್ಕೆ ಹೆಚ್ಚಿನ ಹಣ ಕೇಳುತ್ತಿದ್ದಾರೆ ಅಂತಾ ದೂರು ನೀಡಿರುವುದಿಲ್ಲ. ಹಾಗೇಯೇ ನನ್ನ ವಿರುದ್ಧವು ಯಾವುದೇ ದೂರುಗಳನ್ನು ಸಲ್ಲಿಸಿರುವುದಿಲ್ಲ ಮತ್ತು ಕಾರ್ಯಲಯದ ಕೆಲಸಕ್ಕಾಗಿ ನಾನು ಯಾರಿಗೂ ಹಣದ ಬೇಡಿಕೆಯನ್ನು ಇಟ್ಟಿಲ್ಲ ಹಾಗೂ ಯರ ಕೆಲಸವನ್ನು ವಿಳಂಬವಾಗಿ ಮಾಡಿಲ್ಲ. ಉಪನೋಂದಣಿ ಕಚೇರಿ, ಲಕ್ಷ್ಮೇಶ್ವರದಲ್ಲಿ ನಾನೊಬ್ಬನೇ ಸರಕಾರಿ ನೌಕರನಾಗಿದ್ದು, ಸಾರ್ವಜನಿಕರೊಂದಿಗೆ ನಿರಂತರವಾಗಿ ವ್ಯವಹರಿಸಬೇಕಾಗಿದ್ದರಿಂದ, ಗಣಕಯಂತ್ರದ ಮೂಲಕ ಉತ್ಪತ್ತಿಯಾದ ರಶೀದಿಯಂತೆ ಸಾರ್ವಜನಿಕರಿಂದ ರಶೀದಿ ಹಣ ಸ್ವೀಕರಿಸಲು ಶ್ರೀ. ಗಣೇಶರವರಿಗೆ ತಿಳಿಸಿದಂತೆ ಅವರು ರಶೀದಿಯ ಮೊತ್ತವನ್ನು ಸ್ವೀಕರಿಸಿ, ಸಂಜೆ ಕಚೇರಿ ವೇಳೆ ನಂತರ ನನಗೆ ಒಪ್ಪಿಸುತ್ತಿದ್ದು, ನಾನು ದೈನಂದಿನ ವಹಿಯೊಂದಿಗೆ ತಾಳೆ ಮಾಡಿ ಮರುದಿವಸ ಅವನ ಮುಖಾಂತರವೇ ಬ್ಯಾಂಕಿಗೆ ಹಣ ಜಮಾ ಮಾಡಿಸುತ್ತಾ ಬಂದಿದ್ದು, ಯಾವುದೇ ಹಣದ ದುರುಪಯೋಗ ಆಗಿರುವುದಿಲ್ಲ. ಇದಕ್ಕೆ ಹೊರತಾಗಿ Karnataka Agricultural Credit Operations and Miscellaneous Provisions Act 1974 ರಡಿ ಸ್ವೀಕರಿಸಲಾದ Form III ಗಳನ್ನು ಫೈಲ್ ಮಾಡಲು ತಗಲುವ ಶುಲ್ಕಗಳನ್ನು ಸ್ವೀಕರಿಸುವ ಕೆಲಸವನ್ನು ಅವನಿಗೆ ನೀಡಲಾಗಿತ್ತು. ಅವನು ಅವುಗಳನ್ನು ಸ್ವೀಕರಿಸಿ, ನೋಂದಣಿ ಕೆಲಸ ಕಡಿಮೆ ಇದ್ದಾಗ ಅವುಗಳನ್ನು ಗಣಕಯಂತ್ರ ನಿರ್ವಾಹಕರಿಗೆ ನೀಡಿ ಫೈಲಿಂಗ್ ಮಾಡಿಸಿ, ಸಂಜೆ ಆ ಹಣವನ್ನು ನನಗೆ ನೀಡುತ್ತಾ ಬಂದಿರುತ್ತಾನೆ. ಅವುಗಳನ್ನು ದೈನಂದಿನ ವಹಿಯಲ್ಲಿ ನಮೂದಿಸಿ ಮರು ದಿವಸ ಬ್ಯಾಂಕ್ ಜಮಾ ಮಾಡಲಾಗುತ್ತಿತ್ತು. ನೊಂದಣಿ ಕೆಲಸದ ಒತ್ತಡವಿದ್ದಾಗ Form III ಗಳನ್ನು ಆಗಿಂದಾಗಲೇ ಫೈಲು ಮಾಡಲು ಸಾಧ್ಯವಾಗದ ಪ್ರಯುಕ್ತ ರೈತರ ಅನುಕೂಲಕ್ಕಾಗಿ ಕೂಡಲೇ ಸಹಿಮಾಡಿಕೊಟ್ಟು ಅವರಿಗೆ ಸಾಲ ಪಡೆಯಲು ಅವಕಾಶ ಮಾಡಿಕೊಡುತ್ತಿದ್ದರಿಂದ, ಕಚೇರಿಯಲ್ಲಿ ಫೈಲ್ ಆಗಬೇಕಾದ Form III ಬಹಳಷ್ಟು ಬಾಕಿ ಇದ್ದರಿಂದ ಅವುಗಳ ಹಣ ಅವನ ಹತ್ತಿರವೇ ಇತ್ತು. ಕಳೆದ ಎಂಡು ವರ್ಷಗಳಿಂದ ಈ ಪದ್ಧತಿಯನ್ನೇ ಅನುಸರಿಸುತ್ತಾ ಬಂದಿದ್ದು, ವರ್ಷದ ಕೊನೆಯೊಳಗೆ ಫೈಲಿಂಗ್‌ಗೆ ಬಂದ ಎಲ್ಲಾ Form III ಗಳನ್ನು ಫೈಲಿಂಗ್ ಮಾಡಲಾಗುತ್ತಿದ್ದುದರಿಂದ ಈ ಕಾರ್ಯಲಯದಲ್ಲಿ ಯಾವುದೇ ಲೋಪದೋಷಗಳಾಗಿಲ್ಲ. ಈ ರೀತಿಯಾಗಿ ಕಾರ್ಯಾಲಯದ ಕೆಲಸವನ್ನು ನಡೆಸಿಕೊಂಡು ಬಂದಿದ್ದು, ಸಾರ್ವಜನಿಕರಿಗೆ ಉತ್ತಮವಾದ ಸೇವೆಯನ್ನು ನೀಡುತ್ತಾ ಬಂದಿದ್ದು, ನನ್ನ ವಿರುದ್ಧ ಯಾವ ದೂರುಗಳು ಬಂದಿರಲಿಲ್ಲ.

ದಿನಾಂಕ:12/12/2019ರಂದು ಎಸಿಬಿ ಗದಗರವರು ದಾಳಿ ನಡೆಸಿ ತಪಾಸಣೆ ನಡೆಸಿರುತ್ತಾರೆ. ದಾಳಿ ವೇಳೆಯಲ್ಲಿ ನನಗೆ ನೋಂದಣಿ ಕಾರ್ಯವನ್ನು ಮುಂದುವರಿಸುವಂತೆ ತಿಳಿಸಿದಾಗ ನಾನು ನೋಂದಣಿ ಕಾರ್ಯವನ್ನು ಮುಂದುವರಿಸಿ ಸಾಯಂಕಾಲ 05-30ರವರೆಗೆ ನೋಂದಣಿ ಕೆಲಸವನ್ನು ಮಾಡಿರುತ್ತೇನೆ. ಎಸಿಬಿ ತನಿಖಾ ತಂಡದ ಸಿಬ್ಬಂದಿಯವರು ನಾನು ಹಣ ಘೋಷಣಾ ವಹಿಯಲ್ಲಿ ಹಣ ಘೋಷಣೆ

ಮಾಡದಿರುವುದನ್ನು ನನ್ನ ಗಮನಕ್ಕೆ ತಂದಾಗ ನಾನು ಅವರ ಎದುರಿನಲ್ಲಿ ನನ್ನ ಎಲ್ಲಾ ಜೇಬುಗಳನ್ನು ಪರಿಶೀಲಿಸಿ ಅವರ ಎದುರಿನಲ್ಲೇ ನಾನು 100/-ರೂ. ಅಂತಾ ನಮೂದಿಸಿರುತ್ತೇನೆ. ಸಂಜೆ ಎಸಿಬಿಯವರು ರಾಜಸ್ವ ಸಂಗ್ರಹಣೆ ಬಗ್ಗೆ ನನ್ನನ್ನು ಕೇಳಿದಾಗ ಇನ್ನು ದೈನಂದಿನ ವಹಿಯನ್ನು ಇನ್ನೂ ಬರೆದಿಲ್ಲಾ ಅಂತಾ ಅವರಿಗೆ ತಿಳಿಸಿದಾಗ, ಆ ಹಣ ಎಲ್ಲಿದೆ ಅದನ್ನು ಲೆಕ್ಕ ಮಾಡಿ ಅಂತಾ ನನಗೆ ತಿಳಿಸಿದ್ದರಿಂದ, ನಾನು ಆಗ ಗಣೇಶನನ್ನು ರಸೀದಿಯಿಂದ ಸ್ವೀಕರಿಸಿದ ಹಣವನ್ನು ತೋರಿಸುವಂತೆ ಹೇಳಿದಾಗ, ಅವನು ತನ್ನ ಪರ್ಸನ್ನು ನನಗೆ ಕೊಟ್ಟಿದ್ದು, ಅದನ್ನು ನಾನು ತನಿಖಾ ತಂಡದವರಿಗೆ ಕೊಟ್ಟಿರುತ್ತೇನೆ. ನಾನು ಎಸಿಬಿಯವರಿಗೆ ಅವನ ಪರ್ಸನ್ನು ಕೊಡುತ್ತಿದ್ದಾಗ ಗಣೇಶರವರು ಆ ಪರ್ಸಿನಲ್ಲಿ Form III ಗೆ ಸಂಬಂಧಿಸಿದ ಹಣವು ಇದೆಯಂತೆ ಹೇಳಿದ್ದಲ್ಲದೇ ನಂತರ Form III ಗಳನ್ನು ತೋರಿಸಿರುತ್ತಾನೆ. ಆ ಪರ್ಸಿನಲ್ಲಿ ಒಟ್ಟು 30,495/- ಇತ್ತೆಂದು ತಿಳಿಯುತ್ತದೆ. ಅಂದರೆ ಗಣೇಶನ ಹೆಸರಿಗೆ ತೋರಿಸಿದ ರೂ.17,200/-ಹಾಗೂ ನನ್ನಲ್ಲಿ ಸಿಕ್ಕಿದೆ ಅಂತ ಬರೆದುಕೊಂಡ ರೂ.9,390/- ಹಾಗೂ ಅಂದು ರಸೀದಿಯಿಂದ ಸಂಗ್ರಹವಾದ ರೂ.3,975/-, ಒಟ್ಟು ರೂ.30,495/- ಇದ್ದುದ್ದು ಕಂಡುಬರುತ್ತದೆ. ನಾನು ಗಣೇಶನಿಂದ ಅವನ ಪರ್ಸನ್ನು ಪಡೆದು ಎಸಿಬಿ ಅವರಿಗೆ ನೀಡುತ್ತಿರುವ ದೃಶ್ಯವನ್ನೇ ಚಿತ್ರಿಸಿಕೊಂಡು ನನ್ನಲ್ಲಿ ರೂ.9,390/- ಸಿಕ್ಕಿದೆ ಎಂದು ಬರೆದಿರುತ್ತಾರೆ ಅಂತ ಹೇಳಬಯಸುತ್ತೇನೆ. ಏಕೆಂದರೆನಾನು ಹಣ ಘೋಷಣಾ ವಹಿಯಲ್ಲಿ ರೂ.100/- ಅಂತ ಅವರ ಮುಂದೆಯೇ ನನ್ನ ಜೇಬುಗಳನ್ನು ತಪಾಸಣೆ ಮಾಡಿಕೊಂಡೆ ಬರೆದಿರುತ್ತೇನೆ. ನಂತರ ನನ್ನನ್ನು ನಾನು ಲಕ್ಷ್ಮೇಶ್ವರದಲ್ಲಿ ವಾಸವಿದ್ದ ಮನೆಗೆ ಕರೆದುಕೊಂಡು ಹೋಗಿ ಮನೆಯನ್ನು ಶೋಧಿಸಿದರು. ಅಲ್ಲಿ ಅವರಿಗೆ ಹಣವಾಗಲೀ ಅಥವಾ ಇತರ ದಾಖಲೆಗಳಾಗಲೀ ಸಿಕ್ಕಿಲ್ಲ. ಆದರೆ ಈ ವಿಷಯವನ್ನು ಅವರು ತನಿಖಾ ವರದಿಯಲ್ಲಿ ಉಲ್ಲೇಖಿಸಿರುವುದಿಲ್ಲಾ.

ನನ್ನಲ್ಲಿ ಹಣ ಸಿಕ್ಕಿದೆ ಎಂದು ಬರೆದಿದ್ದು ನನಗೆ ಗೊತ್ತಾಗಿದ್ದು, ನನಗೆ ಜಾಮೀನು ಸಿಕ್ಕಿದ ನಂತರವೇ. ನನ್ನ ಅಂಗಾಂಗಗಳನ್ನು ಪರಿಶೀಲಿಸುತ್ತಿರುವಾಗ ಆ ಹಣ ಸಿಕ್ಕಿದೆ ಅಂತಾ ಬರೆದಿರುವುದರಿಂದ ನಾನು ಅವುಗಳ ಫೋಟೋ ಮತ್ತು ವಿಡಿಯೋಗಳ ಪ್ರತಿಯನ್ನು ಕೇಳಿದ್ದು, ಅವುಗಳನ್ನು ವಿಚಾರಣೆ ಹಂತದಲ್ಲಿ ಇದೆ ಅಂತಾ ನನಗೆ ಒದಗಿಸಿರುವುದಿಲ್ಲ.

ಲಕ್ಷ್ಮೇಶ್ವರದಲ್ಲಿ ನಾನು ವಾಸವಾಗಿದ್ದ ಮನೆಯ ಶೋಧನೆ ನಂತರ ನನ್ನನ್ನು ಕಚೇರಿಗೆ ಕರೆದುಕೊಂಡು ಬಂದು ಪಂಚನಾಮೆಗೆ ಸಹಿ ಹಾಕುವಂತೆ ಸೂಚಿಸಿದರು. ನನ್ನ ಹತ್ತಿರ ಯಾವ ಹಣವು ಇಲ್ಲದಿದ್ದರಿಂದ ಮತ್ತು ನನ್ನ ಮನೆಯಲ್ಲಿ ಹಣವು ಸಿಕ್ಕಿಲ್ಲದಿದ್ದರಿಂದ ನಾನು ಪಂಚನಾಮೆಯನ್ನು ಓದದೇ ಸಹಿ ಮಾಡಿಬಿಟ್ಟೆ. ನನ್ನಿಂದಾದ ಈ ತಪ್ಪು ನನ್ನನ್ನು ನ್ಯಾಯಾಂಗ ಬಂಧನಕ್ಕೆ ಕೊಡುವುದಕ್ಕೆ ಕಾರಣವಾಯಿತಲ್ಲದೇ 16-ದಿವಸಗಳ ಕಾಲ ಜೈಲಿನವಾಸವನ್ನು ಅನುಭವಿಸಬೇಕಾಯಿತು ಹಾಗೂ 20-ತಿಂಗಳ ಅಮಾನತಿನಲ್ಲಿಯೂ ಇರಬೇಕಾಯಿತು.

ನಾನು ಜಾಮೀನು ಪಡೆದ ನಂತರ ಗದಗ ಎಸಿಬಿ ಕಚೇರಿಗೆ ನನ್ನ ಮೊಬೈಲ್ ಪಡೆಯಲು ಹೋದಾಗ ಇನ್ನು ಡಿ.ಎಸ್.ಪಿ. ಶ್ರೀ ವಾಸುದೇವರಾಮ. ಎನ್ ರವರು ಬಂದಿರಲಿಲ್ಲ. ಅವರನ್ನು ಆ ಕಚೇರಿಯ ಸಿಬ್ಬಂದಿಯೊಬ್ಬರು ದೂರವಾಣಿ ಮುಖಾಂತರ ಸಂಪರ್ಕಿಸಿ ವಿಷಯ ತಿಳಿಸಿದಾಗ, ಅವರು ಬರುವ ತನಕ ಕಾಯಬೇಕೆಂದು ತಿಳಿಸಿದರು. ಸ್ವಲ್ಪ ಹೊತ್ತಿನ ನಂತರ ಅವರು ಬಂದಾಗ ಅವರನ್ನು ಭೇಟಿಯಾದೆ. ಆಗ ಅವರು Sorry ಭಟ್ರೆ, ನಿಮ್ಮ ಮೇಲೆ ಯಾವ ಕಂಪ್ಲೆಂಟ್ ಇರಲಿಲ್ಲ, ನಿಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯವಿತ್ತೆಂದು ಹೇಳಿದರು. ಆಗ ನಾನು ನನ್ನ ಪ್ರಾರಬ್ಧ ಅಂತ ಹೇಳಿ ನನ್ನ ಮೊಬೈಲ್ ಪಡೆದುಕೊಂಡು ಬಂದೆ, ನಾನು ತಪ್ಪಿತಸ್ಥನಲ್ಲ ಅನ್ನೋದು ಅವರ ಮಾತುಗಳೇ ಪುಷ್ಟೀಕರಿಸುತ್ತದೆ.

ಅಂಚೆ ಮೂಲಕ ಸ್ವೀಕರಿಸಿದ ದೂರು ಅರ್ಜಿಯನ್ನು ಆಧಾರವಾಗಿಟ್ಟು, ದೂರುದಾರರು ಸಂಪರ್ಕಕ್ಕೆ ಸಿಗದಿದ್ದರೂ, ಗೋಪ್ಯವಾಗಿ ತನಿಖೆ ಮಾಡುವಂತೆ ಆದೇಶ ಮಾಡಿ, ಆ ತನಿಖೆಯ ಆಧಾರದ ಮೇಲೆ ಕಚೇರಿ ಮೇಲೆ ದಾಳಿ ನಡೆಸಿ, ನನ್ನ ಬಳಿ ಹಣ ಸಿಕ್ಕದಿದ್ದರೂ ಹಣ ಸಿಕ್ಕಿದೆ ಅಂತಾ ಬರೆದು, ನ್ಯಾಯಾಂಗ ಬಂಧನಕ್ಕೆ ನೀಡಿ 16-ದಿವಸಗಳ ಕಾಲ ಜೈಲು ಅನುಭವಿಸುವಂತೆ ಮಾಡಿ 16-ತಿಂಗಳು ಕಾಲ ಅಮಾನತ್ತಿನಲ್ಲಿರುವಂತೆ ಮಾಡಿರುವುದು ನನಗಾದ ಅನ್ಯಾಯ ಅಂತಾ ಹೇಳಬಯಸುತ್ತೇನೆ. ನನ್ನ ವಿರುದ್ಧ ದೂರು ಬಂದಾಗ ನೈಸರ್ಗಿಕ ನ್ಯಾಯದಡಿ ನನಗೆ ಉತ್ತರಿಸಲು ಒಂದು ಅವಕಾಶ ನೀಡಿದ್ದರೇ ನನಗಾದ ಈ ಅನ್ಯಾಯವನ್ನು ತಪ್ಪಿಸಬಹುದಾಗಿತ್ತು. ಮೇಲೆ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ತಾವು ಇಲಾಖಾ ವಿಚಾರಣೆಯನ್ನು ಕೈಬಿಟ್ಟು ನನಗೆ ನ್ಯಾಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ಆದರ ಪೂರ್ವಕವಾಗಿ ವಿನಂತಿಸಿ ಕೊಳ್ಳುತ್ತೇನೆ" ಎಂದು ಸಮಜಾಯಿಷಿ ನೀಡಿರುತ್ತಾರೆ.

**3.** 2ನೇ ಎದುರುದಾರರಿಗೆ ಸಾಕಷ್ಟು ಕಾಲಾವಕಾಶ ನೀಡಿದರೂ ಪರಿವೀಕ್ಷಣಾ ಟಿಪ್ಪಣಿಗೆ ಉತ್ತರ ಸಲ್ಲಿಸಿರುವುದಿಲ್ಲ. ಕಾರಣ, ಪರಿವೀಕ್ಷಣಾ ಟಿಪ್ಪಣಿಗೆ ಅವರ ಆಕ್ಷೇಪಣೆ ಏನೂ ಇಲ್ಲವೆಂದು ಪರಿಗಣಿಸಲಾಗಿದೆ.

**4.** 2ನೇ ಎದುರುದಾರರು ಮೆ// ಹೆಚ್‌ಸಿಎಲ್ ಕಂಪೆನಿ (ಶ್ರೀವಿನ್ ಇನ್‌ಫೋ ಕಾಮ್ ಲಿ.), ನೌಕರರಾಗಿ ದಿನಾಂಕ:16/02/2014ರಿಂದ ಡಾಟಾ ಎಂಟ್ರಿ ಆಪರೇಟರ್ ಆಗಿ ಗದಗ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಹೊರಗುತ್ತಿಗೆ ನೌಕರರಾಗಿ ಕರ್ತವ್ಯ ನಿರ್ವಹಿಸಿ ನಂತರದಲ್ಲಿ 2016 ರಿಂದ ಲಕ್ಷ್ಮೇಶ್ವರ ಪಟ್ಟಣದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಹೊರಗುತ್ತಿಗೆ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು ಇವತ್ತಿನವರೆವಿಗೂ ಉಪನೋಂದಣಿ ಕಚೇರಿಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಘಟನೆಯ ನಂತರವೂ ಅವರನ್ನು ಕಚೇರಿಯ ಕರ್ತವ್ಯದಿಂದ ವಜಾ ಮಾಡಿರುವುದಿಲ್ಲ. ಸದರಿಯವರು ಸರ್ಕಾರಿ ನೌಕರರ ವ್ಯಾಪ್ತಿಯಡಿ ಬರುವುದಿಲ್ಲ. ಆದುದರಿಂದ, 2ನೇ ಎದುರುದಾರರ ವಿರುದ್ಧ ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸಲು ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿದೆ.

5. 1ನೇ ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, 1ನೇ ಎದುರುದಾರರು ಸಾರ್ವಜನಿಕರಿಂದ ಅನಧಿಕೃತವಾಗಿ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಹಣ ಪಡೆದುಕೊಂಡಿರುವುದು ಕಂಡುಬರುತ್ತದೆ. 1ನೇ ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

6. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1ನೇ ಎದುರುದಾರರು ಸಾರ್ವಜನಿಕರಿಂದ ಅನಧಿಕೃತವಾಗಿ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಹಣ ಪಡೆದುಕೊಂಡಿರುವುದು ಕಂಡುಬರುತ್ತದೆ. ತನ್ಮೂಲಕ 1ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಅದಲ್ಲದೆ ಎದುರುದಾರರಾದ **ಶ್ರೀ. ಶ್ರೀಕಾಂತ ಭಟ್ ಬಿನ್ ಸುಬ್ರಾಯ್, ಹಿರಿಯ ಉಪನೋಂದಾಣಾಧಿಕಾರಿ, ಲಕ್ಷ್ಮೇಶ್ವರ, ತಾಲ್ಲೂಕು ಲಕ್ಷ್ಮೇಶ್ವರ, ಗದಗ ಜಿಲ್ಲೆ, (ನಿವೃತ್ತಿ ಹೊಂದುವ ದಿ:29-02-2023)ರವರು** ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವರ್ತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ 1ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

8. ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

29/8/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.